ನಂದಾದೀಪ

# ವಾತ್ಸಲ್ಯಪಥ

## ಪ್ರೊ. ಕಮಲಾ ಹಂಪನಾ ಅವರ ಕೆಲವು ನೆನಪುಗಳು



**ಕಡಿದಾಳ್ ಪ್ರಕಾಶ್**

ಚಿತ್ರಗಳು: ಎಂ.ಎಸ್. ಮಂಜುನಾಥ್

ಸಮೃದ್ಧ ಬರವಣಿಗೆಯಂತೆಯೇ ಕಮಲಾ ಹಂಪನಾ ಅವರ ಅಂತಃಕರಣವೂ ಘನವಾದುದು. ಅವರ ವ್ಯಕ್ತಿತ್ವದ ಭಾಗವೇ ಆಗಿದ್ದ ವಾತ್ಸಲ್ಯದ ನೆನಪುಗಳ ಬುತ್ತಿ ನೆನಪಿಸಿಕೊಂಡಷ್ಟೂ ಮಿಗುವಂತಹದ್ದು.

ದುಂಡು ಮುಖ, ಅಗಲವಾದ ಕುಂಕುಮ, ಮುಖಕ್ಕೆ ಹೊಂದುವ ದಪ್ಪ ಕನ್ನಡಕ, ಅಷ್ಟೇ ಅಂದ-ಚೆಂದದ ಉಡುಗೆ ತೊಡುಗೆ, ಗಾಂಭೀರ್ಯದ ನಡಿಗೆ, ಎದುರು ಸಿಕ್ಕಾಗ ತುಳುಕುತ್ತಿದ್ದ ವಾತ್ಸಲ್ಯಭರಿತ ನಗೆಮುಗುಳು, ಹೃದಯಸ್ಪರ್ಶಿ ಮಾತು. ಕಮಲಾ ಹಂಪನಾ ಅವರನ್ನು ನೆನಪಿಸಿಕೊಂಡಾಗ ಇವೆಲ್ಲವೂ ನೆನಪಾಗುತ್ತವೆ.

ಸಮಾರಂಭಗಳಲ್ಲಿ ಅವರು ಆಗಮಿಸುವುದನ್ನು ದೂರದಿಂದ ನೋಡಿದಾಗ, ಅವರ ಜೊತೆಯಲ್ಲಿ ಅವರಷ್ಟೇ ಎತ್ತರದ, ಹಿಂದೆ ಬರುವ ಪತ್ನಿಯ ಬಿಂಬ ನೆತ್ತಿಯಲ್ಲಿ ಕಾಣುವಂತಿರುವ, ಲವಲವಿಕೆಯಲ್ಲಿ ನಡೆಯುವ, ಸಫಾರಿ ಉಡುಗೆ ತೊಟ್ಟ, ಪತ್ನಿಯ ಜೊತೆಯಲ್ಲೇ ಹೆಜ್ಜೆ ಹಾಕಬೇಕು ಎಂದು ನಿರ್ಧರಿಸಿದ್ದರೂ ಮರೆತು ನಾಲ್ಕು ಹೆಜ್ಜೆ ಮುಂದೆ ಹೋಗಿದ್ದರೂ 'ಓ, ಕಮಲಾ ಹಿಂದೆ ಬರುತ್ತಿದ್ದಾರೆ' ಎಂದು ನೆನಪಿಸಿಕೊಂಡು, ಒಮ್ಮೆ ನಿಂತು, ಮತ್ತೆ ಅವರ ಜೊತೆಗೆ ಹೆಜ್ಜೆ ಹಾಕುತ್ತಾ ಬರುತ್ತಿರುವವರು ಪತಿ ಹಂಪನಾ ಎಂದು ಗೊತ್ತೇ ಆಗುತ್ತಿತ್ತು. ಇದು ಸುಮಾರು 63 ವರ್ಷಗಳಿಂದ ಸಾಗುತ್ತಾ ಬಂದ ಸಹಪಯಣ.

ಒಂದನೇ ತರಗತಿಯಲ್ಲಿ ಕಲಿತ 'ಕ-ಮ-ಲ' ಅನ್ನುವುದನ್ನು ಈಗಲೂ ಅದೇ ಧಾಟಿಯಲ್ಲಿ ದಿನದಲ್ಲಿ ಎಷ್ಟು ಸಾರಿ ಕರೆಯುತ್ತಿದ್ದರೋ ಗೊತ್ತಿಲ್ಲ. ಕಮಲಕ್ಕೆ ಯಾವ ಒತ್ತಕ್ಷರ, ಕೊಂಬು, ದೀರ್ಘ, ವಟ್ರುಸುಳಿ ಯಾವುದೂ ಇಲ್ಲದೇ ಇರುವುದರಿಂದ ಸರಾಗವಾಗಿ ಕಮಲ ಎಂದು ಕರೆಯಲು ಅವರಿಗೆ ಹೆಸರು ಅನುಕೂಲವಾಗೇ ಇತ್ತು ಎನ್ನಬಹುದು.

ವಿದ್ಯಾರ್ಥಿ ಜೀವನದಲ್ಲೇ ಕೆಲವು ವರ್ಷ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಂಡು, ಪ್ರೀತಿಸಲು ಸಮಯ ತೆಗೆದುಕೊಂಡವರು. ಆ ಕಾಲದಲ್ಲಿಯೇ ಅಂತರ ಧರ್ಮೀಯರಿಬ್ಬರು ಒಬ್ಬರನ್ನೊಬ್ಬರು ಅರ್ಥ ಮಾಡಿಕೊಂಡು ಸಮಾಜದ, ಕುಟುಂಬದ ವಿರೋಧವಿದ್ದರೂ ಎಲ್ಲವನ್ನೂ ಸಂಭಾಳಿಸಿ